# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.

ಸಂ:ಬಿಬಿಎಂಪಿ/ಸಕಾಅ/ಹೂಉವಿ/ /2020-21

ದಿನಾಂಕ:04.04.2022

**-:ದಿನಾಂಕ:04.04.2022 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:04.04.2022 ರ ಸೋಮವಾರ ಮಧ್ಯಾಹ್ನ 3.00 ಕ್ಕೆ ವಾರ್ಡ್ ನಂ.54-ಹೂಡಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1. | ಶ್ರೀ.ಕುಬೇರಪ್ಪ. ಕೆ | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2. | ಶ್ರೀ.ಶೇಖ್ ಮೊಹಿದ್ದೀನ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-54 | ಹಾಜರಿದ್ದರು. |
| 3 | ಶ್ರೀ.ನಾಗರಾಜ.ವಿ | ಹಿರಿಯ ಆರೋಗ್ಯ ಪರಿವೀಕ್ಷಕರು, | ಹಾಜರಿದ್ದರು. |
| 4 | ಶ್ರೀ.ವೀರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು, | ಹಾಜರಿದ್ದರು. |
| 5 | ಶ್ರೀ.ಚಂದ್ರಪ್ಪ | ಕಿರಿಯ ಆರೋಗ್ಯ ನೀರಿಕ್ಷಕರು ಭೈರತಿ ಹೂಡಿ-54 | ಹಾಜರಿದ್ದರು. |
| 6 | ಶ್ರೀ.ಶಿವರಾಜ್.ಡಿ,ಬಿ | Street Light | ಹಾಜರಿದ್ದರು. |
| 7. | ಶ್ರೀ.ಟಿ.ಆರ್ ಸತೀಶ್ | ಅಯ್ಯಪ್ಪನಗರ | ಹಾಜರಿದ್ದರು. |
| 8. | ಆಕಾಶ್.ಬಿ.ಕೆ | ಆರ್ ಐ ಮೇಜರ್ ರೋಡ್ | ಹಾಜರಿದ್ದರು. |
| 9. | ಶ್ರೀ.ಕೌಶಿಕ್ | ಮಾರ್ಷಲ್ ಹೂಡಿ | ಹಾಜರಿದ್ದರು. |
| 10. | ಶ್ರೀ.ಮುರಳಿಧರ್ | ಎಇ ಬೆಸ್ಕಾಂ | ಹಾಜರಿದ್ದರು. |
| 11. | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 12. | ಶ್ರೀಮತಿ.ಶಿಲ್ಪಾ ಕಶ್ಯಪ್ಪ | ಸಾರ್ವಜನಿಕರು | ಹಾಜರಿದ್ದರು. |
| 13 | ನರಸಮ್ಮ (ನಳಿನಿ) | SWM Sup. | ಹಾಜರಿದ್ದರು. |
| 14. | ರವಿಕುಮಾರ್ | ಜೆ ಇ, ಬಿಡಬ್ಲ್ಯೂಎಸ್ಎಸ್ ಬಿ, | ಹಾಜರಿದ್ದರು. |
| 15. | ಮುಟ್ಟಪ್ಪ.ಜಿ.ಜಿ | ಹೂಡಿ ಸಿ.ಆರ್.ಪಿ (ಬಿಇಓ ಆಫೀಸ್ ಕೆ.ಆರ್.ಪುರಂ) | ಹಾಜರಿದ್ದರು. |
| 16 | ರಾಮಚಂದ್ರಪ್ಪ | ಸಾರ್ವಜನಿಕರು | ಹಾಜರಿದ್ದರು. |

Scanned with CamScanner

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ–54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿಸಭೆ ನಡೆಸಿಕೊಡುವಂತೆ ಕೊರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು ಹಾಗೂ ಮುಂದಿನ ಸಭೆಯಲ್ಲಿ ಗೈರುಹಾಜರಾದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

**ಪೋಲೀಸ್ ಇಲಾಖೆ**

1) ಅಯ್ಯಪ್ಪನಗರ ಸತೀಶ್ ರವರು ಅಯ್ಯಪ್ಪನಗರ ಮುಖ್ಯ ರಸ್ತೆಯಲ್ಲಿ ತುಂಬಾ ಟ್ರಾಫಿಕ್ ಹಾಗುತ್ತಿರುತ್ತದೆ ಆದ್ದರಿಂದ ಪೋಲಿಸ್ ಸಿಬಂಧಿಗಳನ್ನು ಕಾರ್ಯ ನಿರ್ವಹಿಸಲು ಸಭೆಯಲ್ಲಿ ತಿಳಿಸಿದರು.
2) ಎ ಎಸ್ ಐ ಟ್ರಾಫಿಕ್ ರವರು ತಾತ್ಕಾಲಿಕವಾಗಿ ಟ್ರಾಫಿಕ್ ಆಗದಂತೆ ಈಗಾಗಲೇ 4 ಜನ ಸ್ಟಾಫ್‌ಗಳನ್ನು ನಿಯೋಜಿಸಿ ತೊಂದರೆಯಾಗದಂತೆ ನೋಡಿಕೊಳ್ಳುತ್ತೇವೆಂದು ತಿಳಿಸಿದರು.
3) ಹೂಡಿ ಮುಖ್ಯರಸ್ತೆಯಲ್ಲಿ ಬೀದಿಬದಿ ವ್ಯಾಪಾರಿಗಳಿಂದ ಟ್ರಾಫಿಕ್‌ಗೆ ತೊಂದರೆಯಾಗುತ್ತದೆಂದು ತಿಳಿಸಿರುತ್ತಾರೆ.

**ಕ್ರಂ.ಸಂ 1 ಮತ್ತು 3 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಟ್ರಾಫಿಕ್/ಪೋಲೀಸ್ ಇಲಾಖೆ)**

**ಶಾಲೆಯ ನಿರ್ವಹಣೆ**

1) ಪ್ರಸಾದ್ ಸರ್ಕಾರಿ ಶಾಲೆಗಳ ಹತ್ತಿರ ಸುತ್ತಮುತ್ತಲು ತಂಬಾಕು ಹಾಗೂ ಇನ್ನಿತರೆ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುತ್ತಾರೆ ಇದನ್ನು ತೆರವುಗೊಳಿಸಲು ತಿಳಿಸಿದರು.
2) ಪುಟ್ಟಪ್ಪ ಸಾರ್ ರವರು ಆರ್‌ಟಿಇ ಬಗ್ಗೆ ತಿಳಿಸುತ್ತಾ ಸರ್ಕಾರಿ ಶಾಲೆಗಳು 1 ಕಿ.ಮಿ ಸುತ್ತಮುತ್ತಲು ಸರ್ಕಾರಿ ಶಾಲೆಗಳಿಲ್ಲದಿದ್ದರೆ ಖಾಸಗಿ ಶಾಲೆಗಳಲ್ಲಿ ವ್ಯವಸ್ಥೆ ಮಾಡಿರುತ್ತಾರೆ.
3) ಪುಟ್ಟಪ್ಪ ಸಾರ್ ಶಿಕ್ಷಕರು ರವರು ಈ ವಿಚಾರವನ್ನು ಬಿಇಓ ರವರ ಜೊತೆ ಮಾತನಾಡಿ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

**ಕ್ರಂ.ಸಂ 1 ಮತ್ತು 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಬಿ.ಇ.ಓ)**

**I.ಘನತ್ಯಾಜ್ಯ ನಿರ್ವಹಣೆಯ ಬಗ್ಗೆ:-**

1) ಸತೀಷ್ ಅಯ್ಯಪ್ಪನಗರ ಆರ್.ಡಬ್ಲ್ಯೂ.ಎ. ರವರು 2ನೇ ಬ್ಲಾಕ್ ಮುಖ್ಯ ರಸ್ತೆಯಲ್ಲಿ ಓಂಶಕ್ತಿ ಬಡಾವಣೆಯಲ್ಲಿ ಹಾಗೂ 4ನೇ ಬ್ಲಾಕ್‌ನಲ್ಲಿ ಒಣಕಸ ಮತ್ತು ಹಸಿಕಸ ತೆಗೆಯುವುದಕ್ಕೆ ಸರಿಯಾಗಿ ಬರುತ್ತಿಲ್ಲ ಎಂದು ತಿಳಿಸಿದರು.

Scanned with CamScanner

2) ವೆಟ್ ವೆಸ್ಟ್‌ಗಳ ಆಟೋಗಳಿಗೆ ಮೈಕ್‌ಗಳನ್ನು ಅಳವಡಿಸಿ ಬಿಬಿಎಂಪಿ ಸಾಂಗ್‌ಗಳನ್ನು ಹಾಕಬೇಕೆಂದು ಸಭೆಯಲ್ಲಿ ತಿಳಿಸಿದರು.

3) ತಿಗಳರಪಾಳ್ಯ ವಾಟರ್ ಪ್ಲಾಂಟ್ ಹತ್ತಿರ ಕಸಹಾಕುತ್ತಿರುತ್ತಾರೆ ಎಂದು ತಿಳಿಸಿದರು.

**ಕ್ರಂ.ಸಂ 1 ಮತ್ತು 3ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಎಸ್.ಡಬ್ಲ್ಯೂ.ಎಂ/ಹಿ.ಆ.ಪ/ಕಿ.ಆ.ಪ)**

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

1) ರಾಮಚಂದ್ರ ಹೂಡಿ ರವರು ಗಣೇಶ ದೇವಸ್ಥಾನ ಮುಂದೆ ಹೂಡಿ ಮುಖ್ಯರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ರಸ್ತೆಯನ್ನು ಅಗೆದಿದ್ದು ಕೊಡಲೇ ಮುಚ್ಚಸಲು ಸಭೆಯಲ್ಲಿ ತಿಳಿಸಿದರು.
2) ಹೂಡಿ ಹಾಗೂ ಅಯ್ಯಪ್ಪನಗರದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿರುತ್ತದೆ, ಹೂಡಿ ಗ್ರಾಮಕ್ಕೆ ವಾರಕ್ಕೆ ಎರಡು ಸಾರಿ ನೀರನ್ನು ಬೀಡಬೇಕೆಂದು ಸಭೆಯಲ್ಲಿ ತಿಳಿಸಿದರು.
3) ಅಯ್ಯಪ್ಪನಗರ ಶಿಲ್ಪ ಕಶ್ಯಪ್ಪ ನವರು ಕುಡಿಯು ನೀರು ಸರಿಯಾಗಿ ನೀರು ಬೀಡುತ್ತಿಲ್ಲ ವಾರಕ್ಕೆ ಎರಡು ಸಾರಿ ನೀರನ್ನು ಬೀಡಬೇಕೆಂದು ಸಭೆಯಲ್ಲಿ ತಿಳಿಸಿದರು.
4) ಪ್ರಸಾದ್ ರವರು ಕೊಡಿಗೇಹಳ್ಳಿ ಸುತ್ತಮುತ್ತ ಕುಡಿಯುವ ನೀರು ಬರುತ್ತಿಲ್ಲ ಎಂದು ತಿಳಿಸಿದರು.

**ಕ್ರಂ.ಸಂ 1ರಿಂದ 4 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬಿ.ಡಬ್ಲ್ಯೂ.ಎಸ್,ಎಸ್.ಬಿ).**

**ಕಾಮಗಾರಿ ಇಲಾಖೆ**

1) ಅಯ್ಯಪ್ಪನಗರ ಸತೀಷ್‌ನವರು ಅಯ್ಯಪ್ಪನಗರ ಮುಖ್ಯ ರಸ್ತೆ ಸಿಇ ಕಾಲೇಜು ಮುಖ್ಯ ರಸ್ತೆಯಲ್ಲಿ ಗುಂಡಿಗಳು ಇರುತ್ತವೆ ಹಾಗೂ ಸೀಲ್ಟ್‌ಗಳು ತೆಗೆದಿರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.
2) ಹೂಡಿ ವಾರ್ಡ್‌ನಲ್ಲಿ ಈಗಾಗಲೇ ಟೆಂಡರ್ ಆಗಿರುವ ಕಾಮಗಾರಿಯನ್ನು ಕೊಡಲೇ ಪ್ರಾರಂಭಿಸಲು ಕೊರಿದರು.
3) ಹೂಡಿ ಅಬ್ದುಲ್ ನವರು ಮಸೀದಿ ರೋಡ್‌ನಲ್ಲಿ ರಸ್ತೆ ಹಾಗೂ ಶಾಮಣ್ಣ ರೋಡ್ ಸರಿಯಾಗಿ ಇರುವುದಿಲ್ಲ ಎಂದು ಸಭೆಯಲ್ಲಿ ತಿಳಿಸಿದರು.

**ಕ್ರಂ.ಸಂ 1ರಿಂದ 3 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೊಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸಕಾಅ/ಸಅ/ಬಿಬಿಎಂಪಿ/ಮೇಜರ್ ರೋಡ್)**

**ಬೀದಿ ದೀಪ ಹಾಗೂ ಬೆಸ್ಕಾಂ**

1) ಕೊಡಿಗೇಹಳ್ಳಿ ಪ್ರಸಾದ್ ನವರು ಕೋಡಿಗೇಹಳ್ಳಿ ಮುಖ್ಯ ರಸ್ತೆಯಲ್ಲಿ ಬೆಸ್ಕಾಂಯಿಂದ ಕೇಬಲ್ ಹಾಗೂ ಟ್ರಾನ್ಸ್‌ಫಾರಂಗಳನ್ನು ಹಾಕಲು ರಸ್ತೆಯನ್ನು ಅಗದಿರುತ್ತಾರೆ ಆದರೆ ಇದುವರೆಗೋ ಮುಚ್ಚಿರುವುದಿಲ್ಲ ಆದ್ದರಿಂದ ಕೊಡಲೇ ಮುಚ್ಚಲು ತಿಳಿಸಿದರು.
2) ಕೊಡಿಗೇಹಳ್ಳಿ ಕಾಸಾಗ್ರಾಂಡ್‌ನ ಮುಖ್ಯ ರಸ್ತೆಯಲ್ಲಿ ಲೈಟ್‌ಗಳು ಸರಿಯಾಗಿ ಉರಿಯುತ್ತಿರುವುದಿಲ್ಲ ಹಾಗೂ ಹೂಡಿ ತಿಗಳರಪಾಳ್ಯದಲ್ಲಿ ಕಂಬಗಳಲ್ಲಿ ಲೈಟ್ ಉರಿಯುತ್ತಿರುವುದಿಲ್ಲ ಎಂದು ತಿಳಿಸಿದರು.

Scanned with CamScanner

3) ಕೊಡಿಗೇಹಳ್ಳಿ ಪ್ರಸಾದ್ ನವರು ಕೋಡಿಗೇಹಳ್ಳಿ ಮುಖ್ಯ ರಸ್ತೆಯಲ್ಲಿ ಬೆಸ್ಕಾಂಯಿಂದ ವಿದ್ಯುತ್ ಕಂಬದಿಂದ್ದ ಟ್ರಾನ್ಸ್‌ಫಾರಂಗಳನ್ನು ಕೇಬಲ್ ಕನೇಟ್ ಮಾಡದೇ ರಸ್ತೆಯಲ್ಲಿ ಬಿದ್ದಿರುವುತ್ತದೆ. ಕೊಡಲೇ ಕನೇಕ್ಟ್ ಮಾಡಲು ತಿಳಿಸಿದರು.

4) ಅಧ್ಯಕ್ಷರು ಅದರಂತೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸಿದರು.

**ಕ್ರಂ.ಸಂ 1ರಿಂದ 4 ರ ವರೆಗಿನ ದೂರುಗಳ ಬಗ್ಗೆ ಪರಿಶೀಲಿಸಿ ಒಂದುವಾರದೋಳಗಾಗಿ ಕೈಗೊಂಡ ಕ್ರಮಗಳಿಗೆ ಮುಂದಿನ ಸಭೆಗೆ ವರದಿಯೊಂದಿಗೆ ತಿಳಿಸಲಾಯಿತ್ತು.**
**(ಕ್ರಮ:- ಸ.ಕಾ.ಅ./ಸ.ಅ/ಬೆಸ್ಕಾಂ)**

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೊಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-54 ಹೂಡಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

Scanned with CamScanner